# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀಮತಿ ಯೋಗಿತಾ ಹೆಗಡೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಂಪ್ಲಿ ಗ್ರಾಮ ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 228 ವಿಸೇಬಿ 2015, ದಿನಾಂಕ 21.11.2015
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ/538/2015/ಎಆರ್‌ಇ-8, ದಿನಾಂಕ 29.05.2018
3) ಸರ್ಕಾರದ ಸಮಸಂಖ್ಯೆಯ 2ನೇ ಕಾರಣ ಕೇಳಿ ನೋಟೀಸ್, ದಿನಾಂಕ 14.11.2018
4) ಶ್ರೀಮತಿ ಯೋಗಿತಾ ಹೆಗಡೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಂಪ್ಲಿ ಗ್ರಾಮ ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ 01.02.2019

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ, ಶ್ರೀಮತಿ ಯೋಗಿತಾ ಹೆಗಡೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಂಪ್ಲಿ ಗ್ರಾಮ ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಕೆಳಕಂಡ ಆರೋಪಗಳ ಮೇಲೆ ಇಲಾಖಾ ವಿಚಾರಣೆ ನಡೆಸಲು ಸರ್ಕಾರದಿಂದ ಗ್ರಾಅಪ 228 ವಿಸೇಬಿ 2015, ದಿನಾಂಕ 21.11.2015ರ ಸರ್ಕಾರದ ಆದೇಶದಲ್ಲಿ ಕ.ನಾ.ಸೇ.ನಿ.1957 ರ ನಿಯಮ 14(ಎ) ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

**"Charge 1:**

DGO-1 have made excess payment of Rs.12,674.88 even though G.I. ladder was provided in lieu of Aluminium Ladder and further made excess payment of Rs.25,768.80 by providing only 3 sluice valves as against 8 sluice valves and also made excess payment of Rs.32,037.12 by providing only 2 Air valves as against 4 Air valves in the water supply work under Jala Nirmala Project at Hollagadde village in Uttara Kannada Taluk and thereby caused loss of Rs.70,480.80 to the State Exchequer."

ಪ್ರಕರಣದ ಸಂಬಂಧ ಇಲಾಖಾ ವಿಚಾರಣೆ ನಡೆಸಲು ಅಪರ ನಿಬಂಧಕರು, ವಿಚಾರಣೆಗಳು-8 ರವರು ವಿಚಾರಣೆ ನಡೆಸಿ ತನಿಖಾ ವರದಿ ಸಲ್ಲಿಸಿದ್ದು, ಸದರಿಯವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಾಗಿ ವರದಿ ಸಲ್ಲಿಸಿರುತ್ತಾರೆ. ಶ್ರೀಮತಿ ಯೋಗಿತಾ ಹೆಗಡೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಂಪ್ಲಿ ಗ್ರಾಮ ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರಿಂದ ರೂ.70,480/- ಮತ್ತು ಶ್ರೀ ಹೆಚ್.ಬಿ. ಶಂಕರಪ್ಪ, ಅಂದಿನ ಸಹಾಯಕ ನಿರ್ದೇಶಕರು(ತಾಂತ್ರಿಕ), ಜಿಲ್ಲಾ ಜಲ ನಿರ್ಮಲ ಯೋಜನೆ, ಕಾರವಾರ ಇವರಿಂದ ರೂ.57,805/- ಗಳ ಹಣ ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವುದಾಗಿ ತಿಳಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ಸದರಿ ನೌಕರರುಗಳಿಂದ ದುರುಪಯೋಗವಾದ ಮೊತ್ತವನ್ನು ವಸೂಲಿ ಮಾಡುವ ದಂಡನೆ ವಿಧಿಸುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ.

ಶ್ರೀಮತಿ ಯೋಗಿತಾ ಹೆಗಡೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಇವರು ಸರ್ಕಾರದಿಂದ ಜಾರಿಗೊಳಿಸಲಾದ ಕಾರಣ ಕೇಳಿ ನೋಟೀಸಿಗೆ ಕೆಳಗಿನಂತೆ ಲಿಖಿತ ಉತ್ತರ ಸಲ್ಲಿಸಿರುತ್ತಾರೆ.

"ದಿನಾಂಕ 09.08.2016ರವರೆಗೂ ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕಿನ ಕಂಪ್ಲಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ. ಗ್ರಾಮ ಪಂಚಾಯತಿ ಬೇಡಿಕೆಯಂತೆ 2010-11ರಲ್ಲಿ ರೂ.10.44 ಲಕ್ಷಗಳಿಗೆ ಕುಡಿಯುವ ನೀರು ಕಾಮಗಾರಿಯನ್ನು ಜಲನಿರ್ಮಲ ಯೋಜನೆಯಡಿ ಮಂಜೂರಿ ಪಡೆಯಲಾಗಿರುತ್ತದೆ.

ಹಂತ ಹಂತವಾಗಿ ಸಹಾಯಕ ತಾಂತ್ರಿಕ ಸಮಾಲೋಚಕರು ಕಾಮಗಾರಿಯ ಅಳತೆಯನ್ನು ಅಳತೆ ಪುಸ್ತಕದಲ್ಲಿ ನಮೂದಿಸಿ ಬಿಲ್ಲನ್ನು ರೆಕಾರ್ಡ್ ಮಾಡಿರುತ್ತಾರೆ. ದಿನಾಂಕ 03.01.2012ರಂದು ಮೊದಲನೆಯ ಮತ್ತು ಭಾಗಶಃ, ದಿನಾಂಕ 20.06.2012ರಂದು ಎರಡನೆಯ ಮತ್ತು ಭಾಗಶಃ ಬಿಲ್ಲನ್ನು ರೆಕಾರ್ಡ್ ಮಾಡಲ್ಪಟ್ಟಿರುತ್ತದೆ. ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿದಾಗ ಕಾಮಗಾರಿಯ ಹಂತವು ಭೌತಿಕವಾಗಿ ಮುಗಿದಿದ್ದು ಕಂಡುಬಂದಿರುತ್ತದೆ. ಈ ಬಗ್ಗೆ ಗ್ರಾಮಸ್ಥರನ್ನು ಮತ್ತು ಗ್ರಾಮ ನೀರು ನೈರ್ಮಲ್ಯ ಸಮಿತಿಯ ಸದಸ್ಯರುಗಳನ್ನು

ವಿಚಾರಿಸಲಾಗಿ ಕಾಮಗಾರಿಯ ಹಂತವು ಸಮರ್ಪಕವಾಗಿ ಮುಗಿದಿರುತ್ತದೆ ಎಂದು ಹೇಳಿರುತ್ತಾರೆ. ಇವೆಲ್ಲವುಗಳ ಆಧಾರದ ಮೇಲೆ ಕಾಮಗಾರಿಗೆ ಹಂತವಾರು ಹಂವನ್ನು ಪಾವತಿಸಿರುತ್ತೇನೆ.

ದಿನಾಂಕ 19.12.2012ರಂದು ಕಾಮಗಾರಿಯನ್ನು ಹಸ್ತಾಂತರಿಸಿಕೊಳ್ಳುವಾಗಿ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯ ಅಧ್ಯಕ್ಷರು ಮತ್ತು ಇತರೆ ಸದಸ್ಯರುಗಳು ಹಾಜರಿದ್ದು **Pumping Machinary, Pipeline, 8 Tank Sluice valves, 4 Air valves, Alluminium ladder** ಎಲ್ಲವನ್ನು ಪರಿಶೀಲಿಸಿಯೇ ಹಸ್ತಾಂತರಿಸಿಕೊಂಡಿರುತ್ತಾರೆ. ಅಲ್ಲದೆ ಪೈಪ್‌ಲೈನ್ ವಿಸ್ತೀರ್ಣ ಅಂದಾಜು ಪತ್ರಿಕೆಗಿಂತ ಹೆಚ್ಚಿದೆ. ನೀರಿನ ಟ್ಯಾಂಕ್ ಸುಸ್ಥಿತಿಯಲ್ಲಿದೆ ಮತ್ತು ನೀರು ಸರಬರಾಜು ಯಶಸ್ವಿಯಾಗಿ ಆಗುತ್ತಿದ್ದು, ಹಳ್ಳಗದ್ದೆಗೆ ಈ ಯೋಜನೆಯಿಂದಲೇ ನೀರು ಸರಬರಾಜು ಆಗುತ್ತಿದೆ ಎಂದು ತನಿಖಾಧಿಕಾರಿಯು ತಮ್ಮ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ ಮತ್ತು ಸ್ವತಃ ದೂರುದಾರರು ಸಹ ಒಪ್ಪಿಕೊಂಡಿರುತ್ತಾರೆ. ನೀರು ಸರಬರಾಜು ಯೋಜನೆಯ ನಿರ್ವಹಣೆಯ ಅವಧಿಯಲ್ಲಿ ಹಾಳಾದ ಸಾಮಗ್ರಿಗಳನ್ನು ತೆಗೆದು ಸಮಿತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ ಎಂದು ಗ್ರಾಮ ನೀರು ನೈರ್ಮಲ್ಯ ಸಮಿತಿಯ ಸದಸ್ಯರು ಮತ್ತು ಅಧ್ಯಕ್ಷರು ದಿನಾಂಕ 04.01.2015ರಂದು ಉಪಲೋಕಾಯುಕ್ತರ ಕಛೇರಿಗೆ ಪತ್ರ ಬರೆದು ತಿಳಿಸಿರುತ್ತಾರೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ನಾನು ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ನೀರು ಸರಬರಾಜು ಯೋಜನೆಯು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಾತ್ರಿಪಡಿಸಿಕೊಂಡೇ ಹಣವನ್ನು ಪಾವತಿಸಿರುತ್ತೇನೆ. ಕಂಪ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಳ್ಳಿಗದ್ದೆ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುವ ಕಾರಣಕ್ಕೆ ಹಣವನ್ನು ಪಾವತಿಸಿದ್ದೇನೆಯೇ ಹೊರತು ಯಾವುದೇ ದುರುದ್ದೇಶದಿಂದಲ್ಲ. ನನ್ನಿಂದ ಸರ್ಕಾರಕ್ಕೆ ಯಾವುದೇ ರೀತಿಯ ಹಣಕಾಸಿನ ನಷ್ಟ ಆಗಿರುವುದಿಲ್ಲ. ಆದುದರಿಂದ ಮೇಲಿನ ವಸ್ತು ಸ್ಥಿತಿಯನ್ನು ಪರಿಗಣಿಸಿ ನನ್ನ ಮೇಲಿನ ಆಪಾದನೆಗಳು ನಿರಾಧಾರವಾಗಿರುವುದರಿಂದ ವಿಚಾರಣಾ ವರದಿಯನ್ನು ಕೈಬಿಡಲು ವಿನಂತಿಸಿರುತ್ತಾರೆ."

ತನಿಖಾಧಿಖಾರಿಗಳು ತನಿಖಾ ವರದಿಯಲ್ಲಿ ಸದರಿ ನೌಕರರ ಮೇಲಿನ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಉಪಲೋಕಾಯುಕ್ತರು ಶ್ರೀಮತಿ ಯೋಗಿತಾ ಹೆಗಡೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಂಪ್ಲಿ ಗ್ರಾಮ ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವೇತನ ಭತ್ಯೆಗಳಲ್ಲಿ ಪ್ರಕರಣದಲ್ಲಿ ದುರುಪಯೋಗವಾದ ಮೊತ್ತ ರೂ.70,480/-ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪರಿಶೀಲಿಸಿ, ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಆರೋಪದ ತೀವ್ರತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಸದರಿ ನೌಕರರುಗಳಿಗೆ ಮೇಲ್ಕಂಡ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನೌಕರರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ, ಶ್ರೀಮತಿ ಯೋಗಿತಾ ಹೆಗಡೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಂಪ್ಲಿ ಗ್ರಾಮ ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವೇತನ ಭತ್ಯೆಗಳಲ್ಲಿ ಪ್ರಕರಣದಲ್ಲಿ ದುರುಪಯೋಗವಾದ ಮೊತ್ತ ರೂ.70,480/-ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 411 ಗ್ರಾಪಂಕಾ 2018, ಬೆಂಗಳೂರು, ದಿನಾಂಕ: 04.04.2019

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಶ್ರೀಮತಿ ಯೋಗಿತಾ ಹೆಗಡೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಂಪ್ಲಿ ಗ್ರಾಮ ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವೇತನ ಭತ್ಯೆಗಳಲ್ಲಿ ಪ್ರಕರಣದಲ್ಲಿ ದುರುಪಯೋಗವಾದ ಮೊತ್ತ ರೂ.70,480/-ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

5/4/19

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉತ್ತರ ಕನ್ನಡ ಜಿಲ್ಲಾ ಪಂಚಾಯತಿ, ಕಾರವಾರ.
6) ಕಾರ್ಯನಿರ್ವಾಹಕ ಅಧಿಕಾರಿ, ಯಲ್ಲಾಪುರ ತಾಲ್ಲೂಕು ಪಂಚಾಯತಿ, ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ.
7) ಕಾರ್ಯನಿರ್ವಾಹಕ ಅಧಿಕಾರಿ, ಶಿರಸಿ ತಾಲ್ಲೂಕು ಪಂಚಾಯತಿ, ಶಿರಸಿ, ಉತ್ತರ ಕನ್ನಡ ಜಿಲ್ಲೆ.
8) ಶ್ರೀಮತಿ ಯೋಗಿತಾ ಹೆಗಡೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಂಪ್ಲಿ ಗ್ರಾಮ ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ
9) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.